ಅಧ್ಯಕ್ಷರು: ಮುಂದಿನ ಬುಧವಾರ ತರಿಸಿಕೊಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್: ನೀವು ಮುಂದಿನ ವಾರವೆಂದು ಹೇಳುತ್ತೀರಿ, ಆದು ಹೆಲ್ಡ್ ಓವರ್ ಪ್ರಶ್ನೆಯಾಗುತ್ತದೆ ನೀವು ಒಂದು ತಾಸು ಪ್ರಶ್ನೋತ್ತರ ಎಂದು ಹೇಳುತ್ತೀರಿ ಹಾಗಾದರೆ ನಮ್ಮ ಕತೆ ಏನು?

ಅಧ್ಯಕ್ಷರು: ಈ ಸದನ ಮುಗಿಯುವುದರೊಳಗಾಗಿ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಒದಗಿಸುತ್ತೇವೆ. on the floor of the House. Don't worry about that.

ಕೊಳ್ಳೇಗಾಲದ ಆಯುರ್ವೇದ ಆಸ್ಪತ್ರೆಗಳು.

310(2923)

ಶ್ರೀ ಜಿ.ರಾಜುಗೌಡ(ಹನೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಎಷ್ಟು ಆಯುರ್ವೇದಿಕ್ ಆಸ್ಪತ್ರೆಗಳಿವೆ?

ಆ) ಆ ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ವೈದ್ಯರ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಡಾ: ಎ.ಬಿ.ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಕೊಳ್ಳೇಗಾಲ ತಾಲ್ಲೂಕಿನಲ್ಲಿ ಆಯುರ್ವೇದ ಆಸ್ಪತ್ರೆಗಳು ಇಲ್ಲ. ಆದರೆ ಆ ತಾಲೂಕಿನಲ್ಲಿ 2 ಆಯುರ್ವೇದ ಚಿಕಿತ್ಸಾಲಯಗಳು ಇವೆ.

ಆ) ಹೌದು.

ಇ) ಕರ್ನಾಟಕ ಲೋಕಸೇವಾ ಆಯೋಗದಿಂದ ಬಂದಿರುವ ಹೆಚ್ಚುವರಿ ಪಟ್ಟಿಯಲ್ಲಿರುವ 43 ಅಭ್ಯರ್ಥಿಗಳನ್ನು ಖಾಲಿ ಇರುವ ಆಯುರ್ವೇದ ವೈದ್ಯರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಜೊತೆಗೆ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ

ಮೇಲೆ ತಾತ್ಕಾಲಿಕವಾಗಿ ತುಂಬಲು ಸಹ ಆಯಾಯ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದೆ.

ಶ್ರೀ ಜಿ.ರಾಜುಗೌಡ: ಮಾನ್ಯ ಅಧ್ಯಕ್ಷರೆ, ಕೊಳ್ಳೇಗಾಲ ತಾಲೂಕಿನಲ್ಲಿ ಒಂದು ಆಯುರ್ವೇದಿಕ್ ಆಸ್ಪತ್ರೆ ಇದೆ. ಕಳೆದ ಎರಡು ವರ್ಷಗಳಿಂದ ಅಲ್ಲಿ ವೈದ್ಯರಿಲ್ಲ. ನಾನು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ತಾವು ಆ ವೈದ್ಯರನ್ನು ವರ್ಗಾವಣೆ ಮಾಡಿದ್ದೀರಾ ಅಥವಾ ಅವರು ಸತತವಾಗಿ ಗೈರು ಹಾಜರಾಗಿದ್ದಾರೆಯೇ? ಅವರು ಸತತವಾಗಿ ಗೈರು ಹಾಜರಾಗಿದ್ದರೆ, ತಾವು ಅವರ ಬಗ್ಗೆ ಶಿಸ್ತಿನ ಕ್ರಮ ಏನು ತೆಗೆದುಕೊಂಡಿರುತ್ತೀರಿ?

ಡಾ: ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೆ, ಆಯುರ್ವೇದಿಕ್ ಆಸ್ಪತ್ರೆಗಳಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಬಿದ್ದಿವೆ. ಕೆಪಿಎಸ್‌ಸಿ ಯಿಂದ 43 ವೈದ್ಯರುಗಳನ್ನು ಆಯ್ಕೆ ಮಾಡಿ ಕೊಟ್ಟಿರುತ್ತಾರೆ. ಅವರ ಸರ್ಟಿಫಿಕೇಟ್ ವೆರಿಫಿಕೇಶನ್‌ಗೆ ಆದೇಶ ಹೋಗಿರುತ್ತದೆ. ಅದು ಬಂದ ನಂತರ ಮುಂದಿನ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಆಯಾಯ ತಾಲ್ಲೂಕಿನಲ್ಲಿ ಹುದ್ದೆಗಳನ್ನು ತಾತ್ಪೂರ್ತಿಕವಾಗಿ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿರುತ್ತೇವೆ. ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ತಿಳಿಸಿರುವುದರದಿಂದ ಆ ಮೂಲಕ ಅವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಜಿ.ರಾಜುಗೌಡ: ನನ್ನ ಪ್ರಶ್ನೆಗೆ ತಮ್ಮಿಂದ ಉತ್ತರ ಬರಲಿಲ್ಲ. ನನ್ನ ಪ್ರಶ್ನೆ ಏನೆಂದರೆ, ಆ ಚಿಕಿತ್ಸಾಲಯದಲ್ಲಿ ವೈದ್ಯರಿದ್ದರು. ಆ ವೈದ್ಯರನ್ನು ವರ್ಗಾವಣೆ ಮಾಡಿದಿರೋ ಅಥವಾ ಸತತವಾಗಿ ಗೈರು ಹಾಜರಾಗಿದ್ದಾರೋ ಎಂದು ಕೇಳಿದ್ದೇನೆ.

ಡಾ: ಎ.ಬಿ.ಮಾಲಕರೆಡ್ಡಿ: ನನ್ನ ಹತ್ತಿರ ಆ ಬಗ್ಗೆ ಮಾಹಿತಿ ಇರುವುದಿಲ್ಲ, ಮಾನ್ಯ ಸದಸ್ಯರು ಈಗ ವಿಷಯವನ್ನು ಹೇಳಿರುವುದರಿಂದ ಅದನ್ನು ಪರಿಶೀಲಿಸಿ ಅವರಿಗೆ ತಿಳಿಸುತ್ತೇನೆ.

ಶ್ರೀ ಜಿ.ರಾಜುಗೌಡ: ಕೊಳ್ಳೇಗಾಲ ತಾಲ್ಲೂಕಿನಲ್ಲಿ ಆಯುರ್ವೇದಿಕ್ ಚಿಕಿತ್ಸಾಲಯಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಪರಿವರ್ತನೆ ಮಾಡಲು ಸಾಧ್ಯವಿದೆಯೇ?

ಡಾ: ಎ.ಬಿ.ಮಾಲಕರೆಡ್ಡಿ: ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಡುವ ಅವಶ್ಯಕತೆ ಇದ್ದರೆ, ಅದನ್ನು ಅವರ ಕ್ಷೇತ್ರದಲ್ಲಿ ಬೇರೆ ರೀತಿಯಾಗಿ ಪರಿಗಣನೆ ಮಾಡಲಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿರುವ ಎಲ್ಲಾ

ಆಯುರ್ವೇದಿಕ್ ಆಸ್ಪತ್ರೆಗಳಲ್ಲಿ ವೈದ್ಯರುಗಳು ಇರುವುದಿಲ್ಲ. ನನ್ನ ಕ್ಷೇತ್ರದಲ್ಲಿ 4 ಆಯುರ್ವೇದಿಕ್ ಆಸ್ಪತ್ರೆಗಳು ಇವೆ, 5 ವರ್ಷಗಳಿಂದ ಆ ಹುದ್ದೆಗಳು ಖಾಲಿ ಬಿದ್ದಿವೆ. ಹಳ್ಳಿಯವರಿಗೆ ಯಾವ ಚಿಕಿತ್ಸೆ ಸಿಗುತ್ತಿಲ್ಲ. ತಾವು ಈಗ ಹೇಳಿದಿರಿ, ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ ಎಂದು. ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕೊಟ್ಟು ಎಷ್ಟು ದಿವಸಗಳಾಗಿದೆ? ಯಾವ ಜಿಲ್ಲಾಧಿಕಾರಿಗಳು ನೇಮಕಾತಿಯನ್ನು ಮಾಡಿಕೊಂಡಿದ್ದಾರೆ ಎಂಬುದನ್ನು ತಾವು ಹೇಳಬೇಕು. ಜಿಲ್ಲಾಧಿಕಾರಿಗಳು ನೇಮಕಾತಿಯನ್ನು ಮಾಡಿಕೊಳ್ಳದೇ ಹೋದರೆ, ಅಪ್ಲಿಕೇಶನ್ ಕಾಲ್‌ಫಾರ್ ಮಾಡಿದ್ದಾರೆಯೇ? ನೇಮಕಾತಿ ಆದೇಶ ಇದುವರೆಗೆ ಯಾವ ಜಿಲ್ಲಾಧಿಕಾರಿಗೂ ಕೊಡಲಿಲ್ಲ. ನೀವು 43 ಹುದ್ದೆಗಳನ್ನು ಕೆಪಿಎಸ್‌ಸಿ ಯಿಂದ ನೇಮಕಾತಿ ಮಾಡಲಾಗಿದೆ ಎಂದು ಹೇಳುತ್ತಿದ್ದೀರಿ. ಅವರನ್ನು ಕೂಡ ಆಸ್ಪತ್ರೆಗಳಿಗೆ ನೇಮಕ ಮಾಡಲಿಲ್ಲ. ಅವರ ಸರ್ಟಿಫಿಕೇಟ್‌ಗಳು ತಪಾಸಣೆಯಾಗಿ ಇದುವರೆಗೆ ಬರಲಿಲ್ಲವೆಂದು ತಾವು ಹೇಳುತ್ತಿದ್ದೀರಿ. ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಿಕ್ಕೆ ನಿಮಗೆ ಎಷ್ಟು ವರ್ಷಗಳು ಬೇಕಾಗುತ್ತದೆ? ಗ್ರಾಮೀಣ ಪ್ರದೇಶದ ಬಡ ಜನರಿಗೆ ಚಿಕಿತ್ಸೆ ಕೊಡತಕ್ಕಂಥ ಈ ಆಸ್ಪತ್ರೆಗಳಲ್ಲಿ ಇನ್ನು ಎಷ್ಟು ದಿವಸಗಳವರೆಗೆ ಹುದ್ದೆಗಳು ಖಾಲಿ ಇರಬೇಕು ಇದನ್ನು ತಾವು ಹೇಳಿ. ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಡಾ: ಎ.ಬಿ.ಮಾಲಕರೆಡ್ಡಿ: ಮೀಸಲಾತಿಯನ್ನು ನಾವು ಬಹಳ ಸ್ಟ್ರಿಕ್ ಆಗಿ ಮಾಡುತ್ತಿದ್ದೇವೆ. ಅದನ್ನು ವೆರಿಫೈ ಮಾಡದೆ ನೇಮಕಾತಿ ಮಾಡಬಾರದೆಂದು ಕಟ್ಟಾಜ್ಞೆ ಇರುತ್ತದೆ. ಅದಕ್ಕಾಗಿ, ಈ ಸರ್ಟಿಫಿಕೇಟ್ ವೆರಿಫೈ ಮಾಡುವುದರಲ್ಲಿ ಸ್ವಲ್ಪ ಡಿಲೇ ಆಗುತ್ತದೆ. ಇದರ ಬಗ್ಗೆ ನಾನು ಮತ್ತು ಸಮಾಜ ಕಲ್ಯಾಣ ಸಚಿವರು ಸಮಾಲೋಚನೆಯನ್ನು ಮಾಡಿರುತ್ತೇವೆ. ನಾವು ಇಬ್ಬರು ಕುಳಿತುಕೊಂಡು ಚರ್ಚೆ ಮಾಡಿ ಕೂಡಲೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ: ನೇಮಕಾತಿ ಹೊಂದಿದ ವೈದ್ಯರುಗಳಿಗೆ ಸರ್ಟಿಫಿಕೇಟ್ ಕೊಡಲು ಅಧಿಕಾರಿಗಳು 15-20 ಸಾವಿರ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಅವರು ಸರ್ಟಿಫಿಕೇಟ್ ಕೊಡದಿರುವುದರಿಂದ ಇದರಿಂದ ಜನರಿಗೆ ಸೌಲಭ್ಯಗಳು ಸಿಕ್ಕುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ನೇಮಕಾತಿ ಹೊಂದಿರುವ ವೈದ್ಯರುಗಳ ವಿಳಾಸವನ್ನು ತೆಗೆದುಕೊಂಡು ಹೋದರೆ, ಅವರು ಆ ಊರಿನಲ್ಲಿಯೇ ಇಲ್ಲ. ಅದಕ್ಕಾಗಿ ಅದನ್ನು ರಿಜೆಕ್ಟ್ ಮಾಡಿ ಕಳುಹಿಸಿಕೊಡಲು ಹೇಳಿದ್ದೇವೆ.

ಕೊಲ್ಲೂರು ಶ್ರೀ ಮೂಕಾಂಬಿಕಾ ಪ್ರೌಢಶಾಲೆ